MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - FRIDAY 24-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಟಾಂಜಾನಿಯಾ 2021-22 ಸೀಸನ್‌ನಲ್ಲಿ 2,12,000 ಟನ್ ಕಚ್ಚಾ ಗೇರುಬೀಜ ಮಾರಾಟ

ಟಾಂಜಾನಿಯಾ ರೈತರು 2021-22ರ ಸೀಸನ್‌ನಲ್ಲಿ 2,12,000 ಟನ್ ಕಚ್ಚಾ ಗೇರುಬೀಜ ಮಾರಾಟ ಮಾಡಿದ್ದಾರೆನ್ನಲಾಗಿದೆ. ಇದರಿಂದ ಅವರು 54450 ಬಿಲಿಯನ್ ಆದಾಯಗಳಿಸಿದ್ದಾರೆನ್ನಲಾಗಿದೆ. ಈ ಸೀಸನ್‌ನಲ್ಲಿ ಹಿಂದಿನ ಸೀಸನ್‌ಗಿಂತ ಹೆಚ್ಚಿನ ಕಚ್ಚಾ ಗೋಡಂಬಿ ಉತ್ಪಾದನೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.

## ರಿಫೈಂಡ್ ಪಾಮೆಣ್ಣೆ ಆಮದು ಸುಂಕ 5 ಶೇಕಡ ಇಳಿಕೆ

ರಿಫೈಂಡ್ ಪಾಮೆಣ್ಣೆಯ ಅಮದು ಸುಂಕ 17.5 ಶೇಕಡಾದಿಂದ 12.5 ಶೇಕಡಾಗೆ ಇಳಿಕೆಯಾಗಿದ್ದು ಮುಂದಿನ ಮಾರ್ಚ್‌ತನಕ ಮುಂದುವರಿಯಲಿದೆಯೆನ್ನಲಾಗಿದೆ. 2022 ಡಿಸೆಂಬರ್ ತಿಂಗಳ ತನಕ ವ್ಯಾಪಾರಿಗಳು ಆಮದು ಪರವಾನಗಿರಹಿತವಾಗಿದೆ. ರಿಫೈಂಡ್ ಪಾಮೆಣ್ಣೆ ಆಮದು ಮಾಡಬಹುದೆನ್ನಲಾಗಿದೆ.

## ಪ್ರಥಮ 7 ತಿಂಗಳಲ್ಲಿ ಭಾರತದ ಅಕ್ಕಿ ರಫ್ತು 33 ಶೇಕಡಾ ಹೆಚ್ಚಳ

ಈ ಆರ್ಥಿಕ ವರ್ಷದ ಪ್ರಥಮ 7 ತಿಂಗಳಲ್ಲಿ ಭಾರತದ ಅಕ್ಕಿ ರಫ್ತು ಹಿಂದಿನ ವರ್ಷಕ್ಕಿಂತ 33 ಶೇಕಡಾ ಹೆಚ್ಚಳವಾಗಿ 17.79 ಮಲಿಯನ್ ಟನ್‌ಗಳಾಗಿದೆಯೆನ್ನಲಾಗಿದೆ. ಈ ವರ್ಷದ ರಫ್ತು ದಾಖಲೆ 17.72 ಮಿಲಿಯನ್ ಟನ್‌ಗಳಿಗೂ ಅಧಿಕವಾಗುವ ನಿರೀಕ್ಷೆಯಿದೆ. ಉತ್ತಮ ಜಾಗತಿಕ ಬೇಡಿಕೆ ರಫ್ತು ಹೆಚ್ಚಳಕ್ಕೆ ಪೂರಕವಿದೆಯೆನ್ನಲಾಗಿದೆ.

## ಆಮದು ನಿಬಂರ್ಧರಹಿತವಾಗಿ ತೊಗರಿ, ಉದ್ದು ಹಾಗೂ ಹೆಸರುಕಾಳು ಆಮದಿನ ಅವಧಿ 2022 ಮಾರ್ಚ್ 31ರ ತನಕ ಮುಂದುವರಿಕೆ.

ಕೇಂದ್ರ ಸರಕಾರ ತೊಗರಿ, ಉದ್ದು, ಹೆಸರುಕಾಳು ಆಮದು ಗಾತ್ರ ನಿಬಂರ್ಧರಹಿತವಾಗಿ ಆಮದು ಮಾಡುವ ಅವಧಿಯನ್ನು 2022 ಮಾರ್ಚ್ 31 ರತನಕ ಮುಂದೂಡಿದೆ. ವ್ಯಾಪಾರಿಗಳು ಈ ಸೌಲಭ್ಯ ದನ್ವಯ ಮಾರ್ಚ್ 30ರ ತನಕದ ಆಮದು ವಹಿವಾಟು ರಶೀದಿಯಲ್ಲಿ ಆಮದು ಮಾಡಬಹುದಾಗಿದೆಯೆನ್ನಲಾಗಿದ್ದು, ಸರಕುಗಳು ಜೂನ್ 30ರ ಮೊದಲು ಭಾರತ ತಲುಪಲು ಅವಕಾಶವಿದೆಯೆನ್ನಲಾಗಿದೆ. ಬೇಳೆಕಾಳುಗಳ ಬೆಲೆ ಹೆಚ್ಚಳ ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆಯೆನ್ನಲಾಗಿದೆ.

## ಸಂಬಾರ ದ್ರವ್ಯಗಳ ಬೆಳೆ 2014-15 ರಿಂದೀಚೆಗೆ 60 ಶೇಕಡಾ ವೃದ್ಧಿ

ಸಂಬಾರ ವಸ್ತುಗಳ ಬೆಳೆ 2014-15 ರಿಂದೀಚೆ ಭಾರತದಲ್ಲಿ ವಾರ್ಷಿಕ 7.9 ಶೇಕಡಾದಿಂದ 60 ಶೇಕಡ ಪ್ರಗತಿ ಸಾಧಿಸಿದೆಯೆನ್ನಲಾಗಿದೆ. ಉತ್ಪಾದನೆ 2014-15ರಲ್ಲಿ 67.64 ಲಕ್ಷ ಟನ್‌ಗಳಾಗಿದ್ದು 2020-21ರಲ್ಲಿ 107 ಲಕ್ಷ ಟನ್‌ಗಳ ಸಮೀಪಕ್ಕೆ ಬಂದಿದೆಯೆನ್ನಲಾಗಿದೆ. ಇದರಲ್ಲಿ ಜೀರಿಗೆ 14.8 ಶೇಕಡಾ, ಬೆಳ್ಳುಳ್ಳಿ 14.7 ಶೇಕಡಾ, ಶುಂಠಿ 7.5 ಶೇಕಡಾ, ಕೊತ್ತಂಬರಿ (ಧನಿಯಾ) 6.2 ಶೇಕಡಾ, ಕೆಂಪು ಮೆಣಸಿನಕಾಯಿ 4.2 ಶೇಕಡಾ, ಅರಸಿನ 1.3 ಶೇಕಡಾ ಪ್ರಗತಿಯಾಗಿದೆಯೆನ್ನಲಾಗಿದೆ.